Crl Mis 158/2024
ಪಿ-ಡಬ್ಲ್ಯೂ- 01

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಎದುರುದಾರರ ಪರ ವಕೀಲರಿಂದಃ

ನನ್ನ ಮತ್ತು ಎದುರುದಾರನ ನಡುವೆ ಮದುವೆ ಕುಟುಂಬದವರು ನೋಡಿ ಮಾಡಿದ ಅರೆಂಜ್ ಮ್ಯಾರೇಜ್ . ಮದುವೆ ಮಾಡುವ ಸಮಯದಲ್ಲಿ ಮನೆಯವರು ನೋಡಿ ಮಾಡಿದ ಮದುವೆ ಆಗಿತ್ತು . ಎದುರುದಾರನ ಜೊತೆ ಮದುವೆಗೆ ನನ್ನ ಸಂಪೂರ್ಣ ಒಪ್ಪಿಗೆ ಇತ್ತು . ಮದುವೆ ಆಗುವ ಸಮಯದಲ್ಲಿ ಎದುರುದಾರನ ಕುಟುಂಬ ಅವಿಭಕ್ತ ಕುಟುಂಬ ಎಂದು ಗೊತ್ತಿತ್ತು . ಮದುವೆ ಅಗಿ ಗಂಡನ ಮನೆಗೆ ಹೋಗುವಾಗ ಎದುರುದಾರನ ತಂದೆ ತಾಯಿ ಅವರ ಅಣ್ಣ , ಅಣ್ಣನ ಹೆಂಡತಿ ಮತ್ತು ಅವರ ಮಕ್ಕಳು , ಮತ್ತು ಅವರ ತಮ್ಮ , ತಮ್ಮನ ಹೆಂಡತಿ ಮತ್ತು ತಮ್ಮನ ಮಕ್ಕಳು ಮತ್ತು ಮದುವೆ ಆಗಿರದ ಒಬ್ಬ ತಂಗಿ ಇದ್ದರು ಎಂದರೆ ಸರಿ . ಎದುರುದಾರನ ಅಕ್ಕ ನಾಗರತ್ನ ಕೂಡ ಅದೇ ಮನೆಯಲ್ಲಿ ಇದ್ದರು ಎಂದರೆ ಸರಿ . ಎದುರುದಾರನ ಅಕ್ಕ ನಾಗರತ್ನ ಮತ್ತು ಅವರ ಮಗ ಕೂಡ ಇದ್ದರು ಎಂದರೆ ಸರಿ. ಎದುರುದಾರನ ಮನೆ ವ್ಯವಸಾಯ ಮಾಡುವ ಕುಟುಂಬ . ಎದುರುದಾರನಾದ ನನ್ನ ಗಂಡ ವ್ಯವಸಾಯ ಮತ್ತು ಕಾರ್ಪೆಂಟರ್ ಕೆಲಸ ಕೂಡ ಮಾಡುತಿದ್ದರು . ಕೃಷಿ ಸಮಯದಲ್ಲಿ ಕೃಷಿಯ ಕೆಲಸ ಬೇರೆ ಸಮಯದಲ್ಲಿ ಕಾರ್ಪೆಂಟರ್ ಕೆಲಸ ಮಾಡುತಿದ್ದರು ಎಂದರೆ ಸರಿ . ಮದುವೆ ಸಮಯದಲ್ಲಿ ನನ್ನ ಒಳ್ಳೆಯ ರೀತಿಯಲ್ಲಿ ಪ್ರೀತಿಯಿಂದ ನೋಡಿಕೊಂಡಿದ್ದರು ಎಂದರೆ ಸರಿ. ಅದೇ ರೀತಿ ಮನೆಮಂದಿಯವರು ಕೂಡ ನನ್ನ ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸರಿ . ಎದುರುದಾರರಿಗೆ ಬೇಸಾಯ ಮಾಡುವ ಸಣ್ಣ ಸಣ್ಣ 4 ಗದ್ದೆಗಳು ಇದ್ದವು ಎಂದರೆ ಸರಿ . ನನ್ನ ಗಂಡನ ದೊಡ್ಡಪ್ಪ ಮತ್ತು ಚಿಕ್ಕಪ್ಪ ರವರ ಗದ್ದೆಗಳು ನನ್ನ ಗಂಡನ ಜಮೀನಿನ ಅಕ್ಕಪಕ್ಕದಲ್ಲಿಯೇ ಇದ್ದವು ಎಂದರೆ ಸರಿ . ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ಕಾಲಂ 9 ಮತ್ತು 12 ರಲ್ಲಿ ಮೂಕಾಂಬು ಎಂಂದು ಹೆಸರು ಇರುವುದು ನನ್ನ ಗಂಡನ ಚಿಕ್ಕಮ್ಮ . ರಾಮ ಬಿನ್ ದೇವಯ್ಯ ನನ್ನ ಗಂಡನ ಚಿಕ್ಕಪ್ಪ . ಗಿರಿಜ ಎಂದರೆ ನನ್ನ ಅತ್ತೆ . ಸದ್ರಿ ಆಸ್ತಿಗಳಲ್ಲಿ ಅವರ ಕುಟುಂಬದವರಿಗೂ ಕೂಡ ಹಕ್ಕು ಇದೆ ಎಂದರೆ ಸರಿ . ನಾನು ಮಗುವಿಗೆ 8 ತಿಂಗಳು ಆಗುವರೆಗೆ ನಾನು ಗಂಡನ ಮನೆಯಲ್ಲಿ ಇದ್ದೆ . ನಾನು ಗಂಡನ ಮನೆಯಲ್ಲಿ ಇರುವಾಗ

ನನ್ನ ಗಂಡನ ಅಣ್ಣ ಮಂಜುನಾಥ್ ರವರ ಹೆಂಡತಿಯ ಜೊತೆ ನಾನು ಜಗಳ ಆಡಿರಲಿಲ್ಲ . ಸಾಕ್ಷಿ ಮುಂದುವರಿದು ನಾವು ಚೆನ್ನಾಗಿ ಇದ್ದೆವು . ನಮ್ಮೊಳಗೆ ವೈಮನಸ್ಸು ಆಗಿ ಮಂಜುನಾಥ್ ಮನೆ ಬಿಟ್ಟು ಹೋದಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅಲ್ಲೆ ಪಕ್ಕದಲ್ಲಿ ಅವರು ಮನೆ ಕಟ್ಟಿದ್ದರು ಅಲ್ಲಿಗೆ ಹೋದರು ಎಂದು ತಿಳಿಸಿರುತಾರೆ . ಅದೇ ರೀತಿ ನನ್ನ ಗಂಡನ ತಮ್ಮನ ಕುಟುಂಬ ಕೂಡ ಬೇರೆ ಕಡೆ ಹೋದರು ಎಂದರೆ ಸಾಕ್ಷಿ ನಾನು ಮದುವೆ ಆಗಿ ಗಂಡನ ಮನೆಗೆ ಹೋಗುವ ಮೊದಲೇ ಅವರು ಬೇರೆಕಡೆ ರೂಮ್ ಮಾಡಿಕೊಂಡು ಹೋಗಿದ್ದರು ಎಂದು ತಿಳಿಸಿರುತಾರೆ . ನನ್ನ ಗಂಡನ ತಮ್ಮ ಮತ್ತು ಅವರ ಹೆಂಡತಿ ಅದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾನು ಮದುವೆ ಆಗಿ ಹೋದ ನಂತರ ಕೊಟ್ಟ ತೊಂದರೆಯಿಂದ ನನ್ನ ಗಂಡನ ತಮ್ಮ ಮತ್ತು ಅವನ ಹೆಂಡತಿ ಮನೆ ಬಿಟ್ಟು ಹೋದರು ಎಂದರೆ ಸರಿಯಲ್ಲ. ನನ್ನ ಕಿರುಕುಳದಿಂದ ನನ್ನ ಗಂಡನ ತಮ್ಮ ಮತ್ತು ಅವನ ಹೆಂಡತಿ ಬಾಡಿಗೆ ಮನೆಗೆ ಹೋಗಬೇಕಾಯಿತು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಲಾಯಿತು .

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.